1995-96ನೇ ಸಾಲಿನಲ್ಲಿ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳಿಗೆ ಒತ್ತಾಯ.

78 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1995-96ನೇ ಸಾಲಿನಲ್ಲಿ ಮುರಾರ್ಜಿ ದೇಸಾಯಿ ಮಾದರಿ ವಸತಿಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಸರ್ಕಾರದವರು ತೆರೆಯಲು ಉದ್ದೇಶಿಸಿದ್ದಾರೆ.

ಆ) ಮಂಡ್ಯ ಜಿಲ್ಲೆಯ ಹುಲಿಗೆರೆ ಮದ್ದೂರು ತಾಲ್ಲೂಕಿನಲ್ಲಿ ಈ ಶಾಲೆಗಳನ್ನು ತೆರೆಯಲು ಸರ್ಕಾರದವರು ಪರಿಶೀಲಿಸುವರೇ,

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) 1995-96ನೇ ಸಾಲಿನಲ್ಲಿ ದಿವಂಗತ ಪ್ರಧಾನಿ ಮುರಾರ್ಜಿ ದೇಸಾಯಿ ಅವರ ಜನ್ಮಶತಾಬ್ದಿ ಸ್ಮರಣಾರ್ಥಕವಾಗಿ ಪ್ರತಿ ಜಿಲ್ಲೆಗೆ ಒಂದರಂತೆ 20 ಮಾದರಿ ನವೋದಯ ವಸತಿಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಶಾಲೆಗಳನ್ನು ಶಿಕ್ಷಣ ಇಲಾಖೆಯು ನಡೆಸುತ್ತಿರುವ ವಿದ್ಯಾಪೀಠಗಳಲ್ಲಿ ಅಥವಾ ಜಿಲ್ಲಾ ಪಂಚಾಯತ್ ಸಮಿತಿ ಆಯ್ಕೆ ಮಾಡುವ ಸ್ಥಳಗಳಲ್ಲಿ ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆ. ತತ್ಸಂಬಂಧ, ಸ್ಥಳ ಆಯ್ಕೆ ಮಾಡಿ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಜಿಲ್ಲಾಪಂಚಾಯತ್‌ಗಳನ್ನು ಕೋರಲಾಗಿದ್ದು, ಅವರಿಂದ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ.

ಆ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಅಧ್ಯಕ್ಷರು : ನಮಗೆ ರಿಪ್ಲೈ ಬಂದೇ ಇಲ್ಲ. ನಿಮ್ಮ ಸ್ಟಾಫ್ ನೋಡಿ ಅವರು ಕೆಲವೇ ಜನ ಕಂಟಿನ್ಯೂಯಸ್ ಆಗಿ ಯಾವ ಮಂತ್ರಿಗಳು ಬಂದರೂ ಅವರ ಹತ್ತಿರ ಇದ್ದು ಇದ್ದು ಅಭ್ಯಾಸ ಆಗಿಬಿಟ್ಟು, ಅವರು ಜಡ್ಡು ಕಟ್ಟಿಬಿಟ್ಟಿದ್ದಾರೆ. ಅವರಿಗೆ ವಿಧಾನಸಭೆ ಎಂದರೆ ಇವೆಲ್ಲಾ ಲೆಕ್ಕ ಇಲ್ಲ. ನಮಗೆ ಇನ್ನೂ ರಿಪ್ಲೈ ಬಂದಿಲ್ಲ. ನಾನು ಇಲ್ಲಿಗೆ ಬರುವಾಗ ನಾನು ಮಾತನಾಡಬಾರದು ಸದನದಲ್ಲಿ ಸದಸ್ಯರಿಗೆ ಮಾತನಾಡುವುದಕ್ಕೆ ಬಿಡಬೇಕು ಎಂದು ಪ್ರತಿಜ್ಞೆ ಮಾಡಿ ಬರುತ್ತೇನೆ ಆದರೆ ನಾನು ಮಾತನಾಡುವುದು ಅನಿವಾರ್ಯವಾಗುತ್ತಿದೆ. ನನಗೆ ಉತ್ತರ ಬಂದಿಲ್ಲ. I will take up the second question.

ಶ್ರೀ ಕೆ.ಎನ್. ನಾಗೇಗೌಡ : ನನ್ನ ಹತ್ತಿರ ಉತ್ತರ ಇದೆ. ತಾವು ಅಪ್ಪಣೆ ಕೊಟ್ಟರೆ. ನಾನು ಕೇಳಬಹುದಲ್ಲ.

ಅಧ್ಯಕ್ಷರು : ನನ್ನ ಹತ್ತಿರ ಇಲ್ಲವಲ್ಲ. ಆಯಿತು ತಾವು ಸಪ್ಲಿಮೆಂಟರಿ ಕೇಳಿ. Yes, we will go ahead. Please put supplementaries.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಮೊರಾರ್ಜಿ ದೇಸಾಯಿಯವರ 20 ಮಾದರಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇನೆ ಎಂದು ಹೇಳಿದ್ದಾರೆ ಅದಕ್ಕೆ ಜಿಲ್ಲಾಪಂಚಾಯತ್‌ನಿಂದ ಎಲ್ಲೆಲ್ಲಿ ಮಾಡಬೇಕು ಎನ್ನುವ ಮಾಹಿತಿ ಬೇಕು ಎಂದು ಹೇಳಿದ್ದಾರೆ. ಯಾವಾಗ ಮಾಡುತ್ತೀರಿ? ಯಾವ ರೀತಿ ಮಾದರಿ ಶಾಲೆ ಮಾಡುತ್ತೀರಿ. ಈ ಮಾದರಿ ಶಾಲೆಗೆ ಎಷ್ಟು ಹಣ ಖರ್ಚು ಆಗುತ್ತದೆ. ಇದನ್ನು ಈ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಇದೇ ವರ್ಷ ನವೆಂಬರ್ ಒಂದಕ್ಕೆ ಪ್ರಾರಂಭಮಾಡಬೇಕು ಎಂದು ನಿರ್ಣಯ ಮಾಡಿದ್ದೇವೆ. ಕನಿಷ್ಟಪಕ್ಷ ಒಂದು

ನಡೆಸಬೇಕಾದರೆ, ಐದು ಎಕರೆ ಜಾಗ ಬೇಕಾಗುತ್ತದೆ. ಜಿಲ್ಲಾಪಂಚಾಯತ್ ಚೀಫ್ ಸೆಕ್ರೆಟರಿಗೆ ಈಗಾಗಲೇ ಈ ಬಗ್ಗೆ ಪತ್ರ ಬರೆದಿದ್ದೇವೆ. ಅಲ್ಲಿಂದ ರಿಪೋರ್ಟ್ ಬರಬೇಕು. ಅದು ಎಷ್ಟು ಬೇಗ ಬರುತ್ತದೆ ಅಷ್ಟು ಒಳ್ಳೆಯದು. ನವೆಂಬರ್ ಒಂದನೇ ತಾರೀಖಿಗೆ ನಾವು ಚಾಲು ಮಾಡುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಈ 20 ಮಾದರಿ ಶಾಲೆಗಳಿಗೆ ಎಷ್ಟು ಹಣ ಬೇಕಾಗುತ್ತದೆ? ಈ ಮಾದರಿ ಶಾಲೆಯ ವ್ಯವಸ್ಥೆ ಯಾವ ರೀತಿ ಇರುತ್ತದೇ? ಮಾದರಿ ವಸತಿ ಶಾಲೆ ಎಂದರೆ, ಅದರ ಇನ್‌ಟೇಕ್ ಏನು? ಅದು ಯಾವೆ ರೀತಿ ಇರುತ್ತದೆ ಅದರ ಚಿತ್ರಣ ಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಇದರಲ್ಲಿ ಮೊದಲನೇ ವರ್ಷದಲ್ಲಿ 50 ವಿದ್ಯಾರ್ಥಿಗಳು ಇರುತ್ತಾರೆ. ಅದರಲ್ಲಿ 50 ಪರ್ಸೆಂಟ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ, 40 ಪರ್ಸೆಂಟ್ ಹಿಂದುಳಿದ ವಿದ್ಯಾರ್ಥಿಗಳಿಗೆ, ಇನ್ನು 10 ಪರ್ಸೆಂಟ್ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಎಂದು ಮಾಡಿರುತ್ತೇವೆ. ಇದು ಐದು ವರ್ಷದ ಪ್ಲಾನ್. ಐದು ವರ್ಷದಲ್ಲಿ ಇದು ಪೂರ್ತಿಯಾಗುತ್ತದೆ. ಒಂದು ವಸತಿ ಶಾಲೆಗೆ ಒಂದು ಕೋಟಿ ರೂಪಾಯಿ ಹಣ ಖರ್ಚಾಗುತ್ತದೆ. ಐದು ವರ್ಷಗಳಲ್ಲಿ 250 ಮಕ್ಕಳಿಗೆ ಅಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಇರುತ್ತದೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ : ಮಾನ್ಯ ಅಧ್ಯಕ್ಷರೆ. ಸರ್ಕಾರ ಪ್ರೌಢಶಾಲೆಗಳನ್ನು ಮಾದರಿ ವಸತಿ ಪ್ರೌಢಶಾಲೆಗಳು ಎಂದು ಹೇಳಿ, ಪೂಜ್ಯ ಮಹಾತ್ಮಗಾಂಧೀಜಿಯವರ ಹೆಸರಿನಲ್ಲಿ 1984ರಲ್ಲಿ ಪ್ರಾರಂಭ ಮಾಡಿದ್ದಾರೆ. ಗ್ರಾಮೀಣ ಪ್ರದೇಶದಿಂದ ಹೆಚ್ಚು ಅಂಕಗಳನ್ನು ಪಡೆದಂತಹ ಮಕ್ಕಳನ್ನು ಆಯ್ಕೆ ಮಾಡಿದ್ದಾರೆ. ನಾಲ್ಕು ವಿಜನ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರಾರಂಭ ಮಾಡಿದರು. ಈ ವಸತಿ ಶಾಲೆಗಳಿಗೆ ಕಟ್ಟಡಗಳು ಇವೆಯೆ? 1984ರಲ್ಲಿ ಪೂಜ್ಯ ಮಹಾತ್ಮಗಾಂಧಿಯವರ ಹೆಸರಿನಲ್ಲಿ ಪ್ರಾರಂಭ ಮಾಡಿದಂತಹ ವಸತಿ ಪ್ರೌಢಶಾಲೆಗಳು ಯಾವ ಸ್ಥಿತಿಯಲ್ಲಿವೆ ಹೇಳಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಬಹಳ ಪ್ರತಿಭಾನ್ವಿತ ಹುರುಗಿಯರಿಗೆ ನಾಲ್ಕು ಡಿವಿಜನ್‌ನಲ್ಲಿ ನಾಲ್ಕು ವಸತಿ ಶಾಲೆಗಳನ್ನು ತೆಗೆದದ್ದು ನಿಜ. ಆದರೆ ಇದನ್ನು ನನ್ನ ಇಲಾಖೆ ನಡೆಸುವುದಿಲ್ಲ. ಇದು ಮಾನ್ಯ ಮಂತ್ರಿಗಳಾದ ಗೋವಿಂದೇ ಗೌಡರ ಶಿಕ್ಷಣ ಇಲಾಖಾ ವತಿಯಿಂದ ನಡೆಸುತ್ತಾರೆ. ಅವರು ಬೇರೆ ಪ್ರಶ್ನೆಯನ್ನು ಹಾಕಲಿ ಮಾನ್ಯ ಮಂತ್ರಿಗಳೆ ಉತ್ತರವನ್ನು ಹೇಳುತ್ತಾರೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಧಾರವಾಡದಲ್ಲಿ ಇರುವುದನ್ನು ನೋಡಿದ್ದಾರೆ. ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಅಧ್ಯಕ್ಷರು : ಅದು ಆಗುವುದಿಲ್ಲ, ಪ್ರೊಸೀಜರ್ ಅಲ್ಲ, ತಾವು ನೋಟೀಸ್ ಕಳುಹಿಸಿ ಇವತ್ತು ಇದು ಬೇರೆಯವರದು ಇದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದಗೌಡರ 252 (1876) ಈ ಪ್ರಶ್ನೆ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತಹದ್ದು, ಆದುದರಿಂದ ಇದನ್ನು ನಾವು ರೆವಿನ್ಯೂ ಮಂತ್ರಿಯವರ ಇಲಾಖೆಗೆ ಕಳುಹಿಸಿದ್ದೇವೆ.

ಅಧ್ಯಕ್ಷರು : ನೀವು ಈ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಕಳುಹಿಸಿದ್ದೀರಿ?

ಶ್ರೀ ಡಿ.ವಿ. ಸದಾನಂದ ಗೌಡ : ಹೌದು, ಈ ಪ್ರಶ್ನೆ ಪುನಃ ಕಂದಾಯ ಇಲಾಖೆಯಿಂದ ಬರುತ್ತದೊ, ಇಲ್ಲವೊ ಎಂಬುದು ನನ್ನ ಸಂಶಯ

ಅಧ್ಯಕ್ಷರು : ಬರುತ್ತದೆ, ನಾನು ಬರುವ ಹಾಗೆ ಮಾಡುತ್ತೇನೆ. ನಿಮ್ಮ ಸಂಶಯವನ್ನು ನಿವಾರಣೆ ಮಾಡುತ್ತೇನೆ.

ಗಂಗಮತಸ್ಥರು : ಬೆಸ್ತರು ಇವರನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸುವ ಕುರಿತು.

1356 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಗಂಗಮತಸ್ಥರು : ಬೆಸ್ತರು ಇವರನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ.

ಆ) ಹಾಗಿದ್ದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಲು ಎಲ್ಲಾ ಅರ್ಹತೆಯನ್ನು ಕೇಂದ್ರ ಸರ್ಕಾರ ಸೂಚಿಸಿರುವ ಮಾರ್ಗಸೂಚಿಯ ಪ್ರಕಾರ ಈ ಜನಾಂಗ ಅರ್ಹತೆ ಪಡೆದಿದ್ದಾರೆಯೇ, ಹಾಗಿದ್ದಲ್ಲಿ ಅರ್ಹತೆಯ ವಿವರ ತಿಳಿಸುವುದು.

ಇ) 1991ರ ಜನಗಣತಿಯ ಸಮೀಕ್ಷೆ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಎಷ್ಟು ಲಕ್ಷ ಮಂದಿ ಪರಿಶಿಷ್ಟ ಪಂಗಡದವರಿದ್ದಾರೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಗಂಗಾಮತಸ್ಥರು ಹಾಗೂ ಬೆಸ್ತರನ್ನು ಪರಿಶಿಷ್ಟ ಪಂಗಡವೆಂದು ಪರಿಗಣಿಸಲು ಇದುವರೆವಿಗೂ ಯಾವುದೇ ಸರ್ಕಾರಿ ಆದೇಶ ಹೊರಡಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 1991ರ ಜನಗಣತಿಯ ಪ್ರಕಾರ, ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 19.15 ಲಕ್ಷ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪರಿವಾರ ಸಮಾಜದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಸಭೆಯಲ್ಲೂ ಕೂಡ ಬಹಳಷ್ಟು ವಿಷಯ ಇದರ ಬಗ್ಗೆ ಚರ್ಚೆಯಾಗಿದೆ. ಪರಿವಾರ ಸಮಾಜದವರನ್ನು ಸೇರಿಸಬೇಕೆನ್ನುವಂತಹ ಒಂದು ವಿಷಯ ಚರ್ಚೆಯಾದ ನಂತರ, ಮತ್ತೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಕೆಲವಾರು ಸಂದರ್ಭದಲ್ಲಿ ಸೇರಿಸುತ್ತೇವೆಂದು ಹೇಳಿದ್ದಾರೆ. 'ಪರಿವಾರ' ಎನ್ನುವುದು ನನಗೆ ತಿಳಿದಮಟ್ಟಿಗೆ ಅದು ಒಂದು ಸಮುದಾಯ, ಯಾವುದೇ ಜಾತಿ ಅಲ್ಲ, ಈ ಪರಿವಾರ ಎನ್ನತಕ್ಕಂಥ ಪದವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ, ಲಕ್ಷಾಂತರ ಜನರು ಈ ಪರಿವಾರ ಸಮುದಾಯದ ಕೆಳಗಡೆ ಬರುವಂತಹ ಜಾತಿಗಳು ಎಲ್ಲಾ ಪರಿಶಿಷ್ಟ ಪಂಗಡಕ್ಕೆ ಬರುತ್ತವೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದು ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ಪರಿವಾರ ಸಮುದಾಯದ ಅಡಿ ಎಷ್ಟು ಜಾತಿಗಳು ಬರುತ್ತದೆ. ಸುಮಾರು ಎಷ್ಟು ಲಕ್ಷ ಜನರನ್ನು ಪರಿಶಿಷ್ಟ ಪಂಗಡಕ್ಕೆ ನೀವು ಸೇರಿಸಬೇಕೆಂದು ಹೊರಟಿದ್ದೀರಿ. ಈಗ ಪ್ರತಿಶತ ಮೀಸಲಾತಿ ಶೇ. 3ರಷ್ಟು ಮಾತ್ರ ಕೊಟ್ಟಿದ್ದೀರಿ. ಇಷ್ಟು ಜನಾಂಗವನ್ನು ಇಷ್ಟು ಲಕ್ಷ ಅಧಿಕವಾಗಿ ಸೇರಿಸುವುದರಿಂದ ತಾವು ಮತ್ತೆ ಏನಾದರೂ ಮೀಸಲಾತಿಯ ಪ್ರಮಾಣವನ್ನು ಜಾಸ್ತಿ ಮಾಡುತ್ತಿರಾ? ಇದು ನನ್ನ ಪ್ರಶ್ನೆ.

ಅಧ್ಯಕ್ಷರು : ನಿಮ್ಮ 'ಅ' ಪ್ರಶ್ನೆಯಲ್ಲಿ ಗಂಗಾಮತಸ್ಥರು ಮತ್ತು ಬೆಸ್ತರು ಇವರನ್ನು ಸೇರಿ ಸಿಲ್ಲವೆಂದು ಹೇಳಿದ ಮೇಲೆ ಬೇರೆ ಪ್ರಶ್ನೆ ಉದ್ಭವಿಸುವುದಿಲ್ಲ.